PW No. 1

(ದಿನಾಂಕಃ ೦೨-೦೮-೨೦೧೭ ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

<u>ಮುಂದುವರೆದ ಮುಖ್ಯ ವಿಚಾರಣೆಃ</u> ವಾದಿ ಪರ ವಕೀಲರಿಂದಃ

ನಾನು ೧ ನೇ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಇರುವ ವಿಷಯ ಸತ್ಯವಾಗಿದ್ದು, ಅದನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿನ ಸಹಿ ನನ್ನದಾಗಿರುತ್ತದೆ. ನಾನು ನನ್ನ ಸಾಕ್ಷ್ಯವನ್ನು ನನ್ನ ಸಹೋದರ ಮತ್ತು ತಾಯಿಯ ಪರವಾಗಿಯೂ ಸಹ ಹಾಜರ ಮಾಡಿದ್ದೇನೆ.

ನಾನು ನನ್ನ ಮುಖ್ಯ ವಿಚಾರಣೆಯ ಪೂರಕವಾಗಿ ಈ ಕೆಳಗಿನ ದಾಖಲೆಗಳನ್ನು ಹಾಜರ ಮಾಡಿದ್ದು, ಅವುಗಳನ್ನು ನೋಡಿ ಗುರ್ತಿಸಿದ್ದೇನೆ.

1. 2 ಆರ್. ಟಿ.ಸಿ ಗಳು ನಿ.ಪಿ-1 ಮತ್ತು 2
2. ಆರ್.ಟಿ.ಸಿ ಯ ದೃಢೀಕೃತ ನಕಲು ನಿ.ಪಿ- 3
3. ಹಕ್ಕು ಬದಲಾವಣೆಯ ವಹಿ ನಿ.ಪಿ-4
4. ಅಸಲು ದಾವಾ ಸಂಖ್ಯೆ 68/2014 ರ ಆದೇಶ ಪುಟದ ದೃಢೀಕೃತ ನಕಲು ನಿ.ಪಿ-5
5. ಅಸಲು ದಾವಾ ಸಂಖ್ಯೆ 68/2014 ರ ವಾದ ಪತ್ರದ ದೃಢೀಕೃತ ನಕಲು ನಿಪಿ-6 ಎಂದು ಗುರುತಿಸಲಾಯಿತು.

ಆದ್ದರಿಂದ ವಾದ ಪತ್ರದಲ್ಲಿ ಕೋರಿದಂತೆ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

<u>ಪಾಟೀ ಸವಾಲುಃ</u> -

ಪ್ರತಿವಾದಿಗಳು ಮತ್ತು ಪ್ರತಿವಾದಿಗಳ ಪರ ವಕೀಲರು ಗೈರ ಹಾಜರಿದ್ದು, ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಅದೆ.

ಸಿ.ಜೆ. & ಜೆ.ಎಂ.ಎಫ್.ಸಿ., ಹುಕ್ಕೇರಿ.